ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂ:ಕಂ:ವಿವಾದ:33/2016-17 ದಿ:21-10-2016

ಉಪಸ್ಥಿತರು: ಜಿ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು**

1) ಲಕ್ಷ್ಮೀ ಗಂಡ: ಚಿದಾನಂದಪ್ಪ
ಕೂರಿಗನೂರು ಗ್ರಾಮ, ಸಿರುಗುಪ್ಪ ತಾಲೂಕ
2. ಹೊಸಳ್ಳಿ ಸಿದ್ದಮ್ಮ ಗಂಡ: ತಿಪ್ಪಯ್ಯ
ಕೂರಿಗನೂರು ಗ್ರಾಮ ಸಿರುಗುಪ್ಪ ತಾಲೂಕ

**ಪ್ರತಿವಾದಿಗಳು**

1) ಹೆಚ್.ವೀರೇಶ ತಂದೆ: ತಿಪ್ಪಯ್ಯ
ಕರೂರು ಗ್ರಾಮ ಸಿರುಗುಪ್ಪ ತಾಲೂಕ
2) ಹೆಚ್. ಬಸಪ್ಪ ತಂದೆ: ತಿಪ್ಪಯ್ಯ
ಕೂರಿಗನೂರುಗ್ರಾಮ ಸಿರುಗುಪ್ಪ ತಾಲೂಕ

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ. ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಕೂರಿಗನೂರು ಗ್ರಾಮ | 186F/2<br>186/a | 0-34<br>1-34 | H-02/2016-17 | 05/2016-17 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಕೂರಿಗನೂರು ಗ್ರಾಮದ ಸ.ನಂ. 186F/2** ವಿಸ್ತೀರ್ಣ **0-34** ಮತ್ತು **186/a** ವಿಸ್ತೀರ್ಣ **1-34** ಸೆಂಟ್ಸ್ ಜಮೀನುಗಳಿಗೆ ಸಂಭಂದಿಸಿದಂತೆ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯ ಪತ್ರ ಪ್ರಕಾರ ಲಕ್ಷ್ಮೀ ಗಂಡ: ಚಿದಾನಂದಪ್ಪ ಇವರ ಹೆಸರಿನಲ್ಲಿ ಖಾತೆಬದಲಾವಣೆ ಮಾಡಲು ನಮೂನೆ-21ನ್ನು ಪ್ರಚುರ ಪಡಿಸಲಾಗಿ. ನಿಗದಿತ ಅವಧಿಯೊಳಗೆ ಹೆಚ್. ವೀರೇಶ ತಂದೆ: ತಿಪ್ಪಯ್ಯ , ಹೆಚ್. ಬಸಪ್ಪ ತಂದೆ: ತಿಪ್ಪಯ್ಯ , ಕರೂರು ಗ್ರಾಮ ಇವರು **ದಿ:08-07-2016** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ-ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸುನೀಡುತ್ತಾ ವಿಚಾರಣೆಯನ್ನು **ದಿ:19-08-2016,09-09-2016, ಮತ್ತು 23-9-2016 ರಂದು ಪ್ರಕರಣಕ್ಕೆ** ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

.ದಿ :-

ವಾದಿಗಳಾದ ಲಕ್ಷ್ಮೀ ಗಂಡ: ಚಿದಾನಂದಪ್ಪ ಕೂರಿಗನೂರು ಗ್ರಾಮ ಇವರು ಕೂರಿಗನೂರು ಗ್ರಾಮದ ಸ.ನಂ. **186F/2** ವಿಸ್ತೀರ್ಣ 0-34 ಮತ್ತು **186/a** ವಿಸ್ತೀರ್ಣ 1-34 ಸೆಂಟ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯಪತ್ರ ಪ್ರಕಾರ ಹೊಸಳ್ಳಿ ಸಿದ್ದಮ್ಮ ಗಂಡ: ತಿಪ್ಪಯ್ಯ ಇವರಿಂದ ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ವಿನಾಕಾರಣ ಆಧಾರ ರಹಿತವಾಗಿ 1) ಹೆಚ್. ವೀರೇಶ ತಂದೆ: ತಿಪ್ಪಯ್ಯ , 2) ಹೆಚ್. ಬಸಪ್ಪ ತಂದೆ: ತಿಪ್ಪಯ್ಯ , ಕರೂರು ಗ್ರಾಮ ಇವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಯಾವುದೇ ವಿಚಾರಣೆಗೂ ಹಾಜರಾಗಿರುವುದಿಲ್ಲ. ಅಥವಾ ಲಿಖಿತ ಹೇಳಿಕೆಗಳನ್ನಾಗಲೀ ನೀಡಿರುವುದಿಲ್ಲ. ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು :-

ಪ್ರತಿವಾದಿಗಳಾದ 1) ಹೆಚ್.ಈರೇಶ ತಂದೆ: ತಿಪ್ಪಯ್ಯ ಕರೂರು, ಗ್ರಾಮ 2) ಹೆಚ್. ಬಸಪ್ಪ ತಂದೆ: ತಿಪ್ಪಯ್ಯ ಕರೂರು ಇವರು, ಕೂರಿಗನೂರು ಗ್ರಾಮದ ಸ.ನಂ.**186F/2** ವಿಸ್ತೀರ್ಣ 0-34 ಮತ್ತು **186/a** ವಿಸ್ತೀರ್ಣ 1-34 ಸೆಂಟ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯಪತ್ರ ಪ್ರಕಾರ ಹೊಸಳ್ಳಿ ಸಿದ್ದಮ್ಮ ಗಂಡ: ತಿಪ್ಪಯ್ಯ ಇವರಿಂದ ಲಕ್ಷ್ಮೀ ಗಂಡ: ಚಿದಾನಂದಪ್ಪ ಕೂರಿಗನೂರು ಗ್ರಾಮ ಇವರು ಖರೀದಿ ಹೊಂದಿದ್ದು ಹಕ್ಕು ಬದಲಾವಣೆ ಸಂದರ್ಭದಲ್ಲಿ ದಿ: 08-07-2016 ರಂದು ತಕರಾರು ಅರ್ಜಿ ಸಲ್ಲಿಸಿದ್ದು ದಿ:19-8-2016 ರಂದು ಮಾತ್ರ ವಿಚಾರಣೆಗೆ ಹಾಜರಾಗಿರುತ್ತಾರೆ. ಯಾವುದೇ ಲಿಖಿತ ಹೇಳಿಕೆಗಳನ್ನಾಗಲೀ ಅಥವಾ ದಾಖಲೆ ಪತ್ರಗಳನ್ನಾಗಲೀ ಸಲ್ಲಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ, ಸಿರುಗುಪ್ಪ ತಾಲೂಕ, ಕೂರಿಗನೂರು ಗ್ರಾಮದ ಸ.ನಂ. **186F/2** ವಿಸ್ತೀರ್ಣ 0-34 ಮತ್ತು **186/a** ವಿಸ್ತೀರ್ಣ 1-34 ಸೆಂಟ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯಪತ್ರ ಪ್ರಕಾರ ಜೆ.ಲಕ್ಷ್ಮೀ ಗಂಡ: ಚಿದಾನಂದಪ್ಪ ಇವರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಕೂರಿಗನೂರು ಗ್ರಾಮದ ಸ.ನಂ. **186F/2** ವಿಸ್ತೀರ್ಣ 0-34 ಮತ್ತು **186/a** ವಿಸ್ತೀರ್ಣ 1-34 ಸೆಂಟ್ ಜಮೀನು ಸಿರುಗುಪ್ಪ ಸಬ್ ರಿಜಿಸ್ಟರ್ ಕಛೇರಿಪತ್ರ ನಂ: **SRG-1-02867/2016-17 Dt.01-07-2016** ರ ನೊಂದಣಿ ಕ್ರಯಪತ್ರ ಪ್ರಕಾರ ಜೆ.ಲಕ್ಷ್ಮೀ ಗಂಡ: ಚಿದಾನಂದಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ21-10-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ, ಕರೂರು,
ಸಿರುಗುಪ್ಪ ತಾಲೂಕು

ಇವರ ಪ್ರತಿಯನ್ನು:
1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕೃತ ಶಾಖೆಗೆ ಮುಂದಿನಕ್ರಮಕ್ಕಾಗಿ
3. ಕಛೇರಿ ಕಡತಕ್ಕೆ